



(ಅವತೀರ್ಣ - ಮಕ್ಕಾದಲ್ಲಿ)

بِسْمِ اللّٰهِ الرَّحْمٰنِ الرَّحِيْمِ ○

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

كٓهٰيٰعٓصٓ ﴿١﴾

1. ಕಾಫ್-ಹಾ-ಯಾ-ಐನ್-ಸ್ವಾದ್.

ذِكْرُ رَحْمَتِ رَبِّكَ عَبْدَهٗ زَكَرِيَّا ﴿٢﴾

2. ಇದು ನಿಮ್ಮ ಪ್ರಭು ತನ್ನ ದಾಸ ಝಕರಿಯ್ಯಾರ ಮೇಲೆ ತೋರಿದ ಕರುಣೆಯ ಪ್ರಸ್ತಾಪ.

اِذْ نَادٰى رَبَّهٗ نِدَآءً خَفِيًّا ﴿٣﴾

3. ಅವರು ತಮ್ಮ ಪ್ರಭುವನ್ನು ಮೆಲುದನಿಯಿಂದ ಕೂಗಿ ಪ್ರಾರ್ಥಿಸುತ್ತಿದ್ದಾಗ.

قَالَ رَبِّ اِنِّىْ وَهَنَ الْعَظْمُ مِنِّىْ وَ
اشْتَعَلَ الرَّاْسُ شَيْبًا وَّلَمْ اَكُنْۢ
بِدُعَآئِكَ رَبِّ شَقِيًّا ﴿٤﴾

4. ಅವರು ಹೀಗೆ ಭಿನ್ನವಿಸಿಕೊಂಡರು- "ಓ ನನ್ನ ಪ್ರಭೂ, ನನ್ನ ಎಲುಬುಗಳು ಕೂಡಾ ದುರ್ಬಲಗೊಂಡಿವೆ. ತಲೆಯು ವೃದ್ಧಾಪ್ಯ ದಿಂದಾಗಿ ಉರಿದೆದ್ದಿದೆ. ಓ ನನ್ನ ಪ್ರಭೂ, ನಿನ್ನನ್ನು ಪ್ರಾರ್ಥಿಸಿ ನಾನೆಂದೂ ನಿರಾಶನಾಗಲಿಲ್ಲ.

وَاِنِّىْ خِفْتُ الْمَوَالِىَ مِنْ وَّرَآءِىْ وَكَانَتِ
امْرَاَتِىْ عَاقِرًا فَهَبْ لِىْ مِنْ لَّدُنْكَ وَلِيًّا ﴿٥﴾

5. ನಿಶ್ಚಯವಾಗಿಯೂ ನನಗೆ ನನ್ನ ಅನಂತರ ನನ್ನ ಬಂಧುಬಳಗದವರ ಕೇಡಿನ ಭಯವಿದೆ ಮತ್ತು ನನ್ನ ಪತ್ನಿ ಬಂಜೆಯಾಗಿರುತ್ತಾಳೆ. ನೀನು ನಿನ್ನ ವಿಶಿಷ್ಟ ಅನುಗ್ರಹದಿಂದ-

يَّرِثُنِىْ وَيَرِثُ مِنْ اٰلِ يَعْقُوْبَ وَاجْعَلْهُ
رَبِّ رَضِيًّا ﴿٦﴾

6. ನನ್ನ ವಾರೀಸುದಾರನೂ ಯಅ್‌ಕೂಬರ ವಂಶದ ವಾರೀಸುದಾರನೂ ಆಗತಕ್ಕ ಓರ್ವ ಉತ್ತರಾಧಿಕಾರಿಯನ್ನು ನನಗೆ ದಯಪಾಲಿಸು ಮತ್ತು ಓ ನನ್ನ ಪ್ರಭೂ, ಅವನನ್ನು ಪ್ರೀತಿ ಪಾತ್ರನಾಗಿ ಮಾಡು."

يٰزَكَرِيَّآ اِنَّا نُبَشِّرُكَ بِغُلٰمِ اسْمُهٗ يَحْيٰى
لَمْ نَجْعَلْ لَّهٗ مِنْ قَبْلُ سَمِيًّا ﴿٧﴾

7. (ಉತ್ತರ ಹೀಗೆ ಬಂತು)"ಓ ಝಕರಿಯ್ಯಾ, ನಾವು ನಿಮಗೆ ಓರ್ವ ಬಾಲಕನ ಸುವಾರ್ತೆ ನೀಡುತ್ತೇವೆ. ಅವನ ಹೆಸರು ಯಹ್ಯಾ ಆಗಿರುವುದು. ನಾವು ಇದಕ್ಕೆ ಮುಂಚೆ ಈ ಹೆಸರಿರುವ ಯಾರನ್ನೂ ಸೃಷ್ಟಿಸಿಲ್ಲ."

8. ಆಗ- "ಓ ನನ್ನ ಪ್ರಭೂ ನನ್ನ ಪತ್ನಿಯು ಬಂಜೆಯಾಗಿದ್ದು ನಾನು ಅತಿ ವೃದ್ಧಾಪ್ಯದಿಂದ ಒಣಗಿ ಹೋಗಿರುವಾಗ ನನ್ನಲ್ಲಿ ಬಾಲಕ ನುಂಟಾಗುವುದು ಹೇಗೆ?" ಎಂದು ಕೇಳಿದರು.

قَالَ رَبِّ أَنَّىٰ يَكُونُ لِي غُلَامٌ وَكَانَتِ امْرَأَتِي عَاقِرًا وَقَدْ بَلَغْتُ مِنَ الْكِبَرِ عِتِيًّا ٨

9. ಆಗ (ಹೀಗೆ) ಉತ್ತರ ಸಿಕ್ಕಿತು- "ಹಾಗೆಯೇ ಆಗುವುದು.[1] ಇದು ನಮಗೊಂದು ಅತಿ ಚಿಕ್ಕ ವಿಷಯವೆಂದು ನಿಮ್ಮ ಪ್ರಭು ಹೇಳುತ್ತಾನೆ. ಇದಕ್ಕೆ ಮುಂಚೆ ನೀನು ಏನೂ ಆಗಿಲ್ಲದಿದ್ದಾಗ ನಾನು ನಿನ್ನನ್ನು ಸೃಷ್ಟಿಸಿದ್ದೆ ತಾನೆ!"

قَالَ كَذَٰلِكَ قَالَ رَبُّكَ هُوَ عَلَيَّ هَيِّنٌ وَقَدْ خَلَقْتُكَ مِنْ قَبْلُ وَلَمْ تَكُ شَيْئًا ٩

10. ಆಗ ಝಕರಿಯ್ಯಾ, "ಓ ನನ್ನ ಪ್ರಭೂ, ನನಗೊಂದು ಸಂಕೇತವನ್ನು ನಿಶ್ಚಯಿಸಿ ಕೊಡು" ಎಂದಾಗ "ನೀನು ಎಡೆಬಿಡದೆ ಮೂರು ದಿನ ಜನರೊಡನೆ ಮಾತನಾಡಲಾಗದಿರುವುದೇ ನಿನಗೆ ಸಂಕೇತ" ಎಂದು ಹೇಳಲಾಯಿತು.

قَالَ رَبِّ اجْعَلْ لِي آيَةً قَالَ آيَتُكَ أَلَّا تُكَلِّمَ النَّاسَ ثَلَاثَ لَيَالٍ سَوِيًّا ١٠

11. ಆ ಪ್ರಕಾರ ಅವರು ಕೊಠಡಿಯಿಂದ ಹೊರಟು ತನ್ನ ಜನಾಂಗದ ಮುಂದೆ ಬಂದರು ಮತ್ತು ಬೆಳಗು ಬೈಗುಗಳಲ್ಲಿ ಕೀರ್ತನೆ ಮಾಡಿರೆಂದು ಅವರಿಗೆ ಸಂಜ್ಞೆಯ ಮೂಲಕ ಆದೇಶಿಸಿದರು.

فَخَرَجَ عَلَىٰ قَوْمِهِ مِنَ الْمِحْرَابِ فَأَوْحَىٰ إِلَيْهِمْ أَنْ سَبِّحُوا بُكْرَةً وَعَشِيًّا ١١

12. "ಓ ಯಹ್ಯಾ ದಿವ್ಯ ಗ್ರಂಥವನ್ನು ಬಿಗಿಹಿಡಿದುಕೋ"[2] ನಾವು ಅವರಿಗೆ ಬಾಲ್ಯದಲ್ಲೇ ಹುಕ್ಮ್[3] ಪ್ರದಾನ ಮಾಡಿದೆವು-

يَا يَحْيَىٰ خُذِ الْكِتَابَ بِقُوَّةٍ وَآتَيْنَاهُ الْحُكْمَ صَبِيًّا ١٢

13. ಮತ್ತು ನಮ್ಮ ಕಡೆಯಿಂದ ಅವರಿಗೆ ಕೋಮಲ ಹೃದಯ ಹಾಗೂ ಪಾವಿತ್ರ್ಯವನ್ನು ನೀಡಿದೆವು. ಅವರು ಮಹಾ ಧರ್ಮ ನಿಷ್ಠರಾಗಿದ್ದರು-

وَحَنَانًا مِنْ لَدُنَّا وَزَكَاةً وَكَانَ تَقِيًّا ١٣

14. ಮತ್ತು ಮಾತಾಪಿತರಿಗೆ ವಿಧೇಯರಾಗಿದ್ದರು. ಅವರು ಉದ್ಧಟ ಹಾಗೂ ಆಜ್ಞೋಲ್ಲಂಘಕರಾಗಿರಲಿಲ್ಲ.

وَبَرًّا بِوَالِدَيْهِ وَلَمْ يَكُنْ جَبَّارًا عَصِيًّا ١٤

15. ಅವರ ಮೇಲೆ ಅವರು ಜನಿಸಿದ ದಿನವೂ ಅವರು ಮರಣ ಹೊಂದುವ ದಿನವೂ ಅವರು ಜೀವಂತಗೊಳಿಸಿ ಎಬ್ಬಿಸಲ್ಪಡುವ ದಿನವೂ ಶಾಂತಿಯಿರಲಿ.

وَسَلَامٌ عَلَيْهِ يَوْمَ وُلِدَ وَيَوْمَ يَمُوتُ وَيَوْمَ يُبْعَثُ حَيًّا ١٥

1. ಅರ್ಥಾತ್- ನಿನ್ನ ವೃದ್ಧಾಪ್ಯ ಮತ್ತು ನಿನ್ನ ಪತ್ನಿಯ ಬಂಜೆತನದ ಹೊರತಾಗಿಯೂ ನಿನಗೆ ಗಂಡು ಮಗು ಹುಟ್ಟುವುದು.
2. ದೇವಾದೇಶದಂತೆ ಹ. ಯಹ್ಯಾ(ಅ) ಹುಟ್ಟಿದರು ಮತ್ತು ಯೌವನಕ್ಕೆ ತಲಪಿದರು ಎಂಬ ವಿವರಗಳನ್ನು ಮಧ್ಯದಲ್ಲಿ ಬಿಟ್ಟು ಬಿಡಲಾಗಿದೆ.
3. 'ಹುಕ್ಮ್' ಎಂದರೆ ನಿರ್ಧಾರ ಶಕ್ತಿ, ಸಂಶೋಧನಾ ಸಾಮರ್ಥ್ಯ, ಧರ್ಮದ ಪರಿಜ್ಞಾನ, ವ್ಯವಹಾರಗಳಿಗೆ ಸಂಬಂಧಿಸಿದಂತೆ ಸರಿಯಾದ ಅಭಿಪ್ರಾಯ ತಾಳುವ ಸಾಮರ್ಥ್ಯ ಮತ್ತು ಅಲ್ಲಾಹನ ವತಿಯಿಂದ ತೀರ್ಮಾನ ಮಾಡುವ ಅಧಿಕಾರ.

16. ಓ ಪೈಗಂಬರರೇ, ಈ ಗ್ರಂಥದಲ್ಲಿ ಮರ್ಯಮರ ವಿಷಯ ಪ್ರಸ್ತಾಪಿಸಿರಿ. ಅವರು ತನ್ನವರಿಂದ ಸರಿದು ಪೂರ್ವದಿಕ್ಕಿನಲ್ಲಿ[4] ಏಕಾಂತ ವಾಸದಲ್ಲಿದ್ದಾಗ-

وَاذْكُرْ فِي الْكِتٰبِ مَرْيَمَ ۘ اِذِ انْتَبَذَتْ مِنْ اَهْلِهَا مَكَانًا شَرْقِيًّا ۙ﴿١٦﴾

17. ಹಾಗೂ ತೆರೆಯನ್ನಿಳಿಸಿ ಅವರಿಂದ ಮರೆಯಾಗಿ ಕುಳಿತಿದ್ದ[5] ಸ್ಥಿತಿಯಲ್ಲಿ ನಾವು ಅವರ ಬಳಿಗೆ ನಮ್ಮ ದೇವಚರರನ್ನು ಕಳುಹಿಸಿದೆವು. ಅವನು ಅವರ ಮುಂದೆ ಓರ್ವ ಪೂರ್ಣ ಮನುಷ್ಯ ರೂಪದಲ್ಲಿ ಪ್ರತ್ಯಕ್ಷನಾದನು.

فَاتَّخَذَتْ مِنْ دُوْنِهِمْ حِجَابًا ۫ فَاَرْسَلْنَآ اِلَيْهَا رُوْحَنَا فَتَمَثَّلَ لَهَا بَشَرًا سَوِيًّا ﴿١٧﴾

18. ಮರ್ಯಮ್- ಥಟ್ಟನೆ, "ನೀನೊಬ್ಬ ದೇವಭಯವುಳ್ಳವನಾಗಿದ್ದರೆ ನಾನು ನಿನ್ನಿಂದ ದಯಾಮಯನಾದ ದೇವನ ಅಭಯ ಯಾಚಿಸುತ್ತೇನೆ" ಎಂದರು.

قَالَتْ اِنِّيْٓ اَعُوْذُ بِالرَّحْمٰنِ مِنْكَ اِنْ كُنْتَ تَقِيًّا ﴿١٨﴾

19. ಆಗ ಅವನು, "ನಾನು ನಿಮ್ಮ ಪ್ರಭುವಿನ ದೂತನಾಗಿರುತ್ತೇನೆ ಮತ್ತು ನಿಮಗೆ ಓರ್ವ ಪವಿತ್ರ ಬಾಲಕನನ್ನು ಕೊಡಲಿಕ್ಕಾಗಿ ಬಂದಿರುತ್ತೇನೆ" ಎಂದನು.

قَالَ اِنَّمَآ اَنَا رَسُوْلُ رَبِّكِ ۖ لِاَهَبَ لَكِ غُلٰمًا زَكِيًّا ﴿١٩﴾

20. ಆಗ ಮರ್ಯಮ್, "ನನ್ನನ್ನು ಪುರುಷನಾರೂ ಮುಟ್ಟದೆ ಇರುವಾಗ ನನ್ನಲ್ಲಿ ಬಾಲಕನಾಗುವುದು ಹೇಗೆ? ಮತ್ತು ನಾನೇನೂ ದುರಾಚಾರಿ ಸ್ತ್ರೀಯಲ್ಲ" ಎಂದರು.

قَالَتْ اَنّٰى يَكُوْنُ لِيْ غُلٰمٌ وَّلَمْ يَمْسَسْنِيْ بَشَرٌ وَّلَمْ اَكُ بَغِيًّا ﴿٢٠﴾

21. ಆಗ ದೇವಚರರು, "ಹಾಗೆಯೇ ಆಗುವುದು[6] ಇದು ನನಗೆ ಬಹಳ ಸುಲಭವಾದುದೆಂದೂ ಆ ಬಾಲಕನನ್ನು ಜನರಿಗೆ ಒಂದು ನಿದರ್ಶನವನ್ನಾಗಿ[7] ಮತ್ತು ನಮ್ಮ ಕಡೆಯಿಂದ ಒಂದು ಕರುಣೆಯನ್ನಾಗಿ ಮಾಡಲಿಕ್ಕೋಸ್ಕರ ನಾವು ಹಾಗೆ ಮಾಡುವೆವೆಂದೂ ನಿನ್ನ ಪ್ರಭು ಹೇಳುತ್ತಾನೆ. ಈ ಕಾರ್ಯ ಆಗಿಯೇ ತೀರಬೇಕಾಗಿದೆ" ಎಂದನು.

قَالَ كَذٰلِكِ ۚ قَالَ رَبُّكِ هُوَ عَلَيَّ هَيِّنٌ ۚ وَلِنَجْعَلَهٗٓ اٰيَةً لِّلنَّاسِ وَرَحْمَةً مِّنَّا ۚ وَكَانَ اَمْرًا مَّقْضِيًّا ﴿٢١﴾

22. ಮರ್ಯಮರಿಗೆ ಆ ಮಗುವಿನ ಗರ್ಭ ಉಂಟಾಯಿತು ಮತ್ತು ಅವರು ಆ ಗರ್ಭ ಸಹಿತ ದೂರದ ಒಂದು ಸ್ಥಳಕ್ಕೆ ಹೋದರು.

فَحَمَلَتْهُ فَانْتَبَذَتْ بِهٖ مَكَانًا قَصِيًّا ﴿٢٢﴾

23. ತರುವಾಯ ಪ್ರಸವ ವೇದನೆಯು ಅವರನ್ನು ಒಂದು ಖರ್ಜೂರದ

فَاَجَآءَهَا الْمَخَاضُ اِلٰى جِذْعِ النَّخْلَةِ ۚ

4. ಅರ್ಥಾತ್- ಬೈತುಲ್ ಮುಕದ್ದಿಸ್‌ನ ಪಶ್ಚಿಮ ಭಾಗದಲ್ಲಿ.
5. ಅರ್ಥಾತ್- ಇಅ್‌ತಿಕಾಫ್‌ನಲ್ಲಿ ಕುಳಿತಿದ್ದರು.
6. ಅರ್ಥಾತ್- ಪುರುಷನ ಸ್ಪರ್ಶವಿಲ್ಲದೆಯೇ ನಿನಗೆ ಮಗು ಹುಟ್ಟುವುದು.
7. ಅರ್ಥಾತ್- ನಾವು ಆ ಮಗುವನ್ನು ಜೀವಂತ ಪವಾಡವಾಗಿ ಮಾಡಬಯಸುತ್ತೇವೆ.

ಮರದೆಡೆಗೆ ತಲುಪಿಸಿತು. ಅವರು, "ಅಕಟ ನಾನು ಇದಕ್ಕಿಂತ ಮುಂಚೆ ಸತ್ತು ಹೋಗಿದ್ದರೆ! ಮತ್ತು ಹೇಳ ಹೆಸರಿಲ್ಲದಂತೆ ಅಳಿದು ಹೋಗಿದ್ದರೆ (ಚೆನ್ನಾಗಿತ್ತು)" ಎನ್ನತೊಡಗಿದರು.[8]

قَالَتْ يٰلَيْتَنِىْ مِتُّ قَبْلَ هٰذَا وَكُنْتُ
نَسْيًا مَّنْسِيًّا ﴿٢٣﴾

24. ದೇವಚರನು ಕಾಲಬಳಿಯಿಂದ ಅವರನ್ನು ಕೂಗಿ ಇಂತೆಂದನು- "ಮರುಗಬೇಡಿರಿ ನಿಮ್ಮ ಪ್ರಭು ನಿಮ್ಮ ತಳಭಾಗದಲ್ಲೊಂದು ಚಿಲುಮೆಯನ್ನು ಹರಿಸಿ ಬಿಟ್ಟಿದ್ದಾನೆ.

فَنَادٰىهَا مِنْ تَحْتِهَآ اَلَّا تَحْزَنِىْ قَدْ
جَعَلَ رَبُّكِ تَحْتَكِ سَرِيًّا ﴿٢٤﴾

25. ಮತ್ತು ನೀವು ಆ ಮರದ ಕಾಂಡವನ್ನು ಹಿಡಿದು ಅಲುಗಾಡಿಸಿರಿ. ನಿಮ್ಮ ಮೇಲೆ ಹಸನಾದ ಖರ್ಜೂರದ ಹಣ್ಣುಗಳು ಉದುರಿ ಬೀಳುವುವು.

وَهُزِّىْٓ اِلَيْكِ بِجِذْعِ النَّخْلَةِ تُسٰقِطْ
عَلَيْكِ رُطَبًا جَنِيًّا ﴿٢٥﴾

26. ಈ ರೀತಿಯಲ್ಲಿ ನೀವು ತಿಂದು, ಕುಡಿದು ಕಣ್ಮನಗಳನ್ನು ತಣಿಸಿರಿ. ನೀವು ಮಾನವರಾರನ್ನಾದರೂ ಕಂಡರೆ -"ನಾನು ಕರುಣಾನಿಧಿ (ಅಲ್ಲಾಹ್)ಗಾಗಿ ಉಪವಾಸ ವ್ರತದ ಹರಕೆ ಹೊತ್ತಿರುವುದರಿಂದ ಇಂದು ಯಾರೊಡನೆಯೂ ಮಾತನಾಡಲಾರೆನೆಂದು- ಹೇಳಿಬಿಡಿರಿ.

فَكُلِىْ وَاشْرَبِىْ وَقَرِّىْ عَيْنًا ۚ فَاِمَّا
تَرَيِنَّ مِنَ الْبَشَرِ اَحَدًا ۙ فَقُوْلِىْٓ اِنِّىْ
نَذَرْتُ لِلرَّحْمٰنِ صَوْمًا فَلَنْ اُكَلِّمَ
الْيَوْمَ اِنْسِيًّا ﴿٢٦﴾

27. ಅನಂತರ ಅವರು ಆ ಮಗುವನ್ನೆತ್ತಿಕೊಂಡು ತನ್ನ ಜನಾಂಗದ ಬಳಿಗೆ ಹೋದರು. ಜನರು, "ಓ ಮರ್ಯಮ್! ನೀನು ಘೋರ ಪಾತಕವನ್ನೆಸಗಿ ಬಿಟ್ಟೆ.

فَاَتَتْ بِهٖ قَوْمَهَا تَحْمِلُهٗ ۗ قَالُوْا يٰمَرْيَمُ
لَقَدْ جِئْتِ شَيْـًٔا فَرِيًّا ﴿٢٧﴾

28. ಓ ಹಾರೂನನ ಸಹೋದರಿ![9] ನಿನ್ನ ತಂದೆ ಕೆಟ್ಟವನಾಗಿರಲಿಲ್ಲ. ನಿನ್ನ ತಾಯಿಯೂ ದುಶ್ಶೀಲೆಯಾಗಿರಲಿಲ್ಲ" ಎನ್ನತೊಡಗಿದರು.

يٰٓاُخْتَ هٰرُوْنَ مَا كَانَ اَبُوْكِ امْرَاَ
سَوْءٍ وَّمَا كَانَتْ اُمُّكِ بَغِيًّا ﴿٢٨﴾

29. ಆಗ ಮರ್ಯಮ್, ಮಗುವಿನ ಕಡೆಗೆ ಇಷಾರೆ ಮಾಡಿದರು. ಆಗ ಜನರು, "ಇದು ತೊಟ್ಟಿಲಲ್ಲಿ ಬಿದ್ದಿರುವಂತಹ ಒಂದು ಶಿಶು, ಇದರೊಡನೆ ನಾವೇನು ಮಾತನಾಡಬಹುದು?" ಎಂದರು.

فَاَشَارَتْ اِلَيْهِ ۗ قَالُوْا كَيْفَ نُكَلِّمُ
مَنْ كَانَ فِى الْمَهْدِ صَبِيًّا ﴿٢٩﴾

30. ಮಗು (ಹೀಗೆ) ಮಾತನಾಡತೊಡಗಿತು: "ನಾನು ಅಲ್ಲಾಹನ

قَالَ اِنِّىْ عَبْدُ اللّٰهِ ۗ اٰتٰىنِىَ الْكِتٰبَ

8. ಈ ಮಾತಿನ ಹಿನ್ನೆಲೆಯನ್ನು ಗಮನಿಸಿದಾಗ ಇದನ್ನು ಹ. ಮರ್ಯಮ್(ಅ) ಹೆರಿಗೆ ಬೇನೆಯಿಂದಾಗಿ ಹೇಳಿರಲಿಲ್ಲವೆಂದು ತಿಳಿಯುತ್ತದೆ. ತಂದೆಯಿಲ್ಲದೆ ಹುಟ್ಟಿದ ಈ ಮಗುವನ್ನು ನಾನು ಎಲ್ಲಿಗೆ ಕೊಂಡೊಯ್ಯಲಿ ಎಂಬ ವ್ಯಥೆಯಿಂದ ಅವರು ಇದನ್ನು ಹೇಳಿದ್ದರು. ಆದ್ದರಿಂದಲೇ ಗರ್ಭವತಿಯಾಗಿದ್ದಾಗ ಅವರು ಒಬ್ಬಂಟಿಯಾಗಿ ದೂರದ ಪ್ರದೇಶಕ್ಕೆ ಹೋಗಿ ಬಿಟ್ಟಿದ್ದರು. ಇಷ್ಟಾಗಿ ಅವರ ತಾಯಿ ಮತ್ತು ಕುಟುಂಬಸ್ಥರು ಊರಿನಲ್ಲೇ ವಾಸವಾಗಿದ್ದರು.

9. ಅರ್ಥಾತ್- ಹಾರೂನರ ಸಂತತಿಯ ಪುತ್ರಿಯೇ! ಅರಬಿ ನಾಣ್ಣುಡಿಯಲ್ಲಿ ಯಾವುದಾದರೂ ಗೋತ್ರಕ್ಕೆ ಸೇರಿದ ವ್ಯಕ್ತಿಯನ್ನು ಆ ಗೋತ್ರದ ಸಹೋದರ ಎನ್ನಲಾಗುತ್ತದೆ. ಅವರ ಜನಾಂಗದ ವ್ಯಕ್ತಿಗಳು ಹೀಗೆ ಹೇಳುವುದರ ಅರ್ಥ, "ನಮ್ಮ ಅತ್ಯಂತ ಶ್ರೇಷ್ಠವಾದ ಧಾರ್ಮಿಕ ಹಿನ್ನೆಲೆಯುಳ್ಳ ಮನೆತನದ ಮಹಿಳೆಯೇ! ನೀನು ಇದೆಂತಹ ಕೆಲಸ ಮಾಡಿದೆ?" ಎಂದಾಗಿತ್ತು.

ದಾಸ[10] ಅವನು ನನಗೆ ಗ್ರಂಥ ನೀಡಿದನು. ಪ್ರವಾದಿಯನ್ನಾಗಿ ಮಾಡಿದನು-

وَ جَعَلَنِیۡ نَبِیًّا ﴿۳۰﴾

31. ಮತ್ತು ನನ್ನನ್ನು ನಾನೆಲ್ಲಿದ್ದರೂ ಅನುಗ್ರಹೀತನಾಗಿರುವಂತೆ ಮಾಡಿದನು ಮತ್ತು ನನ್ನ ಬಾಳಿನುದ್ದಕ್ಕೂ ನಮಾಝ್ ಮತ್ತು ಝಕಾತ್ ಪಾಲಿಸುತ್ತಿರಲು ಆಜ್ಞೆಯಿತ್ತನು.

وَّ جَعَلَنِیۡ مُبٰرَکًا اَیۡنَ مَا کُنۡتُ ۪ وَ اَوۡصٰنِیۡ بِالصَّلٰوۃِ وَ الزَّکٰوۃِ مَا دُمۡتُ حَیًّا ﴿۳۱﴾

32. ನನ್ನನ್ನು ನನ್ನ ಮಾತೆಯ ಋಣ ಸಂದಾಯ ಮಾಡುವವನಾಗಿಸಿದನು[11] ಮತ್ತು ನನ್ನನ್ನು ಅಹಂಕಾರಿಯನ್ನಾಗಿಯೂ ದುಷ್ಟನನ್ನಾಗಿಯೂ ಮಾಡಿರುವುದಿಲ್ಲ.

وَّ بَرًّۢا بِوَالِدَتِیۡ ۫ وَ لَمۡ یَجۡعَلۡنِیۡ جَبَّارًا شَقِیًّا ﴿۳۲﴾

33. ನಾನು ಜನಿಸಿದಾಗಲೂ ಸಾಯುವಾಗಲೂ ಜೀವಂತಗೊಳಿಸಿ ಎಬ್ಬಿಸಲ್ಪಡುವಾಗಲೂ ನನ್ನ ಮೇಲೆ ಶಾಂತಿ ಇದೆ."[12]

وَ السَّلٰمُ عَلَیَّ یَوۡمَ وُلِدۡتُّ وَ یَوۡمَ اَمُوۡتُ وَ یَوۡمَ اُبۡعَثُ حَیًّا ﴿۳۳﴾

34. ಇವರೇ ಮರ್ಯಮರ ಪುತ್ರ ಈಸಾ. ಇವರ ಬಗ್ಗೆ ಜನರು ಸಂಶಯ ಪಡುತ್ತಿರುವುದರ ಸತ್ಯಾಂಶವಿದು.

ذٰلِکَ عِیۡسَی ابۡنُ مَرۡیَمَ ۚ قَوۡلَ الۡحَقِّ الَّذِیۡ فِیۡہِ یَمۡتَرُوۡنَ ﴿۳۴﴾

35. ಯಾರನ್ನಾದರೂ ಮಗನಾಗಿ ಮಾಡಿಕೊಳ್ಳುವುದು ಅಲ್ಲಾಹನಿಗೆ ಭೂಷಣವಲ್ಲ. ಅವನು ಪರಿಶುದ್ಧನು. ಅವನು, ಏನಾದರೂ ಆಗಬೇಕೆಂದು ತೀರ್ಮಾನಿಸಿದರೆ 'ಆಗು' ಎಂದು ಬಿಡುತ್ತಾನೆ ಮತ್ತು ಅದು ಆಗಿಬಿಡುತ್ತದೆ.[13]

مَا کَانَ لِلّٰہِ اَنۡ یَّتَّخِذَ مِنۡ وَّلَدٍ ۙ سُبۡحٰنَہٗ ؕ اِذَا قَضٰۤی اَمۡرًا فَاِنَّمَا یَقُوۡلُ لَہٗ کُنۡ فَیَکُوۡنُ ﴿ؕ۳۵﴾

36. (ಈಸಾ ಹೀಗೆ ಹೇಳಿದ್ದರು): "ನಿಶ್ಚಯವಾಗಿಯೂ ಅಲ್ಲಾಹನು ನನ್ನ

وَ اِنَّ اللّٰہَ رَبِّیۡ وَ رَبُّکُمۡ فَاعۡبُدُوۡہُ ؕ

10. ಇದಕ್ಕೆ ಮೊದಲು 21ನೆಯ ಸೂಕ್ತದಲ್ಲಿ ಪ್ರಸ್ತಾಪಿಸಲಾಗಿರುವ 'ನಿದರ್ಶನ' ಇದುವೇ ಆಗಿತ್ತು. ತೊಟ್ಟಿಲಲ್ಲಿ ಬಿದ್ದುಕೊಂಡಿದ್ದ ನವಜಾತ ಶಿಶು ಮಾತನಾಡಲಾರಂಭಿಸಿತು. ಅದರಿಂದ ಅದೊಂದು ಪಾಪದ ಪರಿಣಾಮವಲ್ಲ ಬದಲಾಗಿ ಅಲ್ಲಾಹನು ತೋರಿಸಿರುವ ಪವಾಡವಾಗಿದೆ ಎಂಬ ವಿಷಯ ಎಲ್ಲರಿಗೂ ಸ್ಪಷ್ಟವಾಯಿತು. ಆಲಿ ಇಮ್ರಾನ್ ಅಧ್ಯಾಯದ ಸೂಕ್ತ 46 ಮತ್ತು ಅಲ್ ಮಾಇದಃ ಅಧ್ಯಾಯದ ಸೂಕ್ತ 110ರಲ್ಲಿಯೂ ಹ. ಈಸಾ(ಅ) ತೊಟ್ಟಿಲಲ್ಲೇ ಮಾತನಾಡಿದರೆಂದು ಹೇಳಲಾಗಿದೆ.

11. ಇಲ್ಲಿ ತಂದೆ-ತಾಯಿಗಳ ಬಾಧ್ಯತೆಯನ್ನು ಈಡೇರಿಸುವವನು ಎನ್ನುವ ಬದಲು ತಾಯಿಯ ಬಾಧ್ಯತೆಯನ್ನು ಈಡೇರಿಸುವವನು ಎನ್ನಲಾಗಿದೆ. ಈಸಾರಿಗೆ(ಅ) ತಂದೆ ಇರಲಿಲ್ಲ ಎಂಬುದಕ್ಕೆ ಇದೂ ಒಂದು ಆಧಾರವಾಗಿದೆ. ಕುರ್‌ಆನಿನಲ್ಲಿ ಎಲ್ಲೆಡೆ ಅವರನ್ನು 'ಈಸಾ ಬಿನ್ ಮರ್ಯಮ್' ಎಂದು ಕರೆಯಲಾಗಿರುವುದೂ ಇದಕ್ಕಿರುವ ಒಂದು ಸ್ಪಷ್ಟ ಸಾಕ್ಷ್ಯವಾಗಿದೆ.

12. ಈ ದೃಷ್ಟಾಂತವನ್ನು ತೋರಿಸುವ ಮೂಲಕ ಅಲ್ಲಾಹನು ಆಗಲೇ ಬನೀಇಸ್ರಾಈಲರ ಮುಂದೆ ತನ್ನ ಹೊಣೆಯನ್ನು ಪೂರ್ತಿಗೊಳಿಸಿದ್ದನು. ಯೌವನಾವಸ್ಥೆಗೆ ತಲಪಿದ ನಂತರ ಹ. ಈಸಾ(ಅ) ಪ್ರವಾದಿತ್ವದ ಕೆಲಸ ಆರಂಭಿಸಿದಾಗ ಅವರ ಜನಾಂಗದವರು ಅವರನ್ನು ನಿರಾಕರಿಸಿದರು. ಮಾತ್ರವಲ್ಲ ಅವರಿಗೆ ಜೀವ ಬೆದರಿಕೆಯೊಡ್ಡಿದರು. ಅವರ ಮಾತೆಯ ಮೇಲೆ ವ್ಯಭಿಚಾರದ ಆರೋಪ ಹೊರಿಸಲೂ ಅವರು ಹೇಸಲಿಲ್ಲ. ಆದ್ದರಿಂದಲೇ ಅಲ್ಲಾಹನು ಯಾವ ಜನಾಂಗಕ್ಕೂ ನೀಡದೇ ಇದ್ದಂತಹ ಶಿಕ್ಷೆಯನ್ನು ಅವರಿಗೆ ನೀಡಿದನು.

13. ಇದು ಕ್ರೈಸ್ತರ ಮಟ್ಟಿಗೆ ಅಲ್ಲಾಹನು ತನ್ನ ಹೊಣೆಯನ್ನು ಪೂರ್ತಿಗೊಳಿಸಿರುವುದಾಗಿದೆ. ಪವಾಡ ಸದೃಶವಾಗಿ ಹುಟ್ಟುವುದು ಅವರನ್ನು ದೇವಪುತ್ರ (ಶಾಂತಂ ಪಾಪಂ) ಎಂದು ಭಾವಿಸಲು ಆಧಾರವಲ್ಲ.

ಪ್ರಭುವೂ ನಿಮ್ಮ ಪ್ರಭುವೂ ಆಗಿರುತ್ತಾನೆ. ಆದುದರಿಂದ ನೀವು ಅವನ ದಾಸ್ಯ-ಆರಾಧನೆಯನ್ನೇ ಮಾಡಿರಿ. ಇದುವೇ ನೇರ ಮಾರ್ಗ."

هٰذَا صِرَاطٌ مُّسْتَقِيْمٌ ﴿٣٦﴾

37. ಆದರೆ ಆ ಬಳಿಕ ವಿವಿಧ ಪಂಗಡಗಳು ಪರಸ್ಪರ ಭಿನ್ನಾಭಿಪ್ರಾಯ ತಾಳಲಾರಂಭಿಸಿದುವು. ಆದುದರಿಂದ ಸತ್ಯನಿಷೇಧಿಗಳಿಗೆ ಅವರು ಕಾಣಲಿರುವ ಒಂದು ಮಹಾದಿನವು ವಿನಾಶ ಕಾಲವಾಗಿರುವುದು.

فَاخْتَلَفَ الْاَحْزَابُ مِنْۢ بَيْنِهِمْ ۚ فَوَيْلٌ لِّلَّذِيْنَ كَفَرُوْا مِنْ مَّشْهَدِ يَوْمٍ عَظِيْمٍ ﴿٣٧﴾

38. ಅವರು ನಮ್ಮ ಮುಂದೆ ಹಾಜರಾಗುವಂದು ಅವರ ಕಿವಿಗಳೂ ಚೆನ್ನಾಗಿ ಆಲಿಸುತ್ತಿರುವುವು ಮತ್ತು ಅವರ ಕಣ್ಣುಗಳೂ ಚೆನ್ನಾಗಿ ನೋಡುತ್ತಿರುವುವು. ಆದರೆ ಇಂದು ಈ ಅಕ್ರಮಿಗಳು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದಿರುತ್ತಾರೆ.

اَسْمِعْ بِهِمْ وَاَبْصِرْ ۙ يَوْمَ يَاْتُوْنَنَا لٰكِنِ الظّٰلِمُوْنَ الْيَوْمَ فِيْ ضَلٰلٍ مُّبِيْنٍ ﴿٣٨﴾

39. ಓ ಪೈಗಂಬರರೇ, ಇವರು ಅಲಕ್ಷ್ಯರಾಗಿರುವ ಹಾಗೂ ವಿಶ್ವಾಸವಿರಿಸದಿರುವ ಈ ಸ್ಥಿತಿಯಲ್ಲಿ ತೀರ್ಪು ನೀಡಲಾಗುವ ಹಾಗೂ ವಿಷಾದಿಸುವ ಹೊರತು ಯಾವ ಅನ್ಯ ಮಾರ್ಗವೂ ಕಾಣದಿರುವಂತಹ ಆ ದಿನದ ಬಗ್ಗೆ ಇವರನ್ನು ಎಚ್ಚರಿಸಿರಿ.

وَاَنْذِرْهُمْ يَوْمَ الْحَسْرَةِ اِذْ قُضِيَ الْاَمْرُ ۘ وَهُمْ فِيْ غَفْلَةٍ وَّهُمْ لَا يُؤْمِنُوْنَ ﴿٣٩﴾

40. ಕಟ್ಟಕಡೆಗೆ ಈ ಭೂಮಿ ಹಾಗೂ ಇದರಲ್ಲಿರುವ ಸಕಲ ವಸ್ತುಗಳ ಉತ್ತರಾಧಿಕಾರಿಗಳು ನಾವೇ ಆಗಿರುವೆವು ಮತ್ತು ಎಲ್ಲರೂ ನಮ್ಮ ಕಡೆಗೇ ಮರಳಿಸಲ್ಪಡುವರು.

اِنَّا نَحْنُ نَرِثُ الْاَرْضَ وَمَنْ عَلَيْهَا وَاِلَيْنَا يُرْجَعُوْنَ ﴿٤٠﴾

41. ಈ ಗ್ರಂಥದಲ್ಲಿ ಇಬ್‌ರಾಹೀಮರ ಬಗ್ಗೆ ಪ್ರಸ್ತಾಪಿಸಿರಿ. ನಿಶ್ಚಯವಾಗಿಯೂ ಅವರೊಬ್ಬ ಸತ್ಯ ಸಂಧರೂ ಪ್ರವಾದಿಯೂ ಆಗಿದ್ದರು.

وَاذْكُرْ فِي الْكِتٰبِ اِبْرٰهِيْمَ ۬ۚ اِنَّهٗ كَانَ صِدِّيْقًا نَّبِيًّا ﴿٤١﴾

42. ಅವರು ತಮ್ಮ ತಂದೆಯೊಡನೆ, "ಅಪ್ಪಾ, ಆಲಿಸಲಾಗದ, ನೋಡಲಾಗದ ಮತ್ತು ತಮ್ಮ ಯಾವ ಕೆಲಸಕ್ಕೂ ಬಾರದ ವಸ್ತುಗಳನ್ನು ತಾವೇಕೆ ಆರಾಧಿಸುತ್ತೀರಿ?

اِذْ قَالَ لِاَبِيْهِ يٰٓاَبَتِ لِمَ تَعْبُدُ مَا لَا يَسْمَعُ وَلَا يُبْصِرُ وَلَا يُغْنِيْ عَنْكَ شَيْـًٔا ﴿٤٢﴾

43. ಅಪ್ಪಾ, ತಮಗೆ ಬಂದಿರದ ಜ್ಞಾನವೊಂದು ನನಗೆ ಬಂದಿವೆ. ತಾವು ನನ್ನನ್ನು ಅನುಸರಿಸಿರಿ. ನಾನು ತಮಗೆ ನೇರ ಮಾರ್ಗವನ್ನು ತೋರಿಸುವೆನು.

يٰٓاَبَتِ اِنِّيْ قَدْ جَآءَنِيْ مِنَ الْعِلْمِ مَا لَمْ يَاْتِكَ فَاتَّبِعْنِيْٓ اَهْدِكَ صِرَاطًا سَوِيًّا ﴿٤٣﴾

44. ಅಪ್ಪಾ, ತಾವು ಶೈತಾನನ ದಾಸ್ಯ-ಆರಾಧನೆ ಮಾಡಬೇಡಿರಿ. ಶೈತಾನನು ರಹ್ಮಾನನ (ಕರುಣಾ ನಿಧಿಯ) ಆಜ್ಞೋಲ್ಲಂಘಕನು.

يٰٓاَبَتِ لَا تَعْبُدِ الشَّيْطٰنَ ۭ اِنَّ الشَّيْطٰنَ كَانَ لِلرَّحْمٰنِ عَصِيًّا ﴿٤٤﴾

45. ಅಪ್ಪಾ, ತಾವು ರಹ್ಮಾನನ ಶಿಕ್ಷೆಗೆ ಗುರಿಯಾಗಿ ಬಿಡುವಿರಿ ಹಾಗೂ ಶೈತಾನನ ಸಂಗಾತಿಯಾಗಿ ಬಿಡುವಿರಿ ಎಂಬ ಭಯ ನನಗಿದೆ" ಎಂದು ಹೇಳಿದರು.

يَٰٓأَبَتِ إِنِّيٓ أَخَافُ أَن يَمَسَّكَ عَذَابٌ مِّنَ ٱلرَّحْمَٰنِ فَتَكُونَ لِلشَّيْطَٰنِ وَلِيًّا ﴿٤٥﴾

46. (ಈ ಸಂದರ್ಭವನ್ನೂ ಇವರಿಗೆ ನೆನಪಿಸಿರಿ) ಆಗ ತಂದೆಯು, "ಇಬ್‌ರಾಹೀಮ್, ನೀನೇನು ನನ್ನ ಆರಾಧ್ಯರಿಂದ ವಿಮುಖನಾದೆಯಾ? ನೀನು (ಈ ನೀತಿಯನ್ನು) ಕೈ ಬಿಡದಿದ್ದರೆ ನಾನು ನಿನ್ನನ್ನು ಕಲ್ಲೆಸೆದು ಕೊಂದು ಹಾಕುವೆನು. ನೀನು ನನ್ನಿಂದ ಶಾಶ್ವತವಾಗಿ ತೊಲಗಿಬಿಡು" ಎಂದನು.

قَالَ أَرَاغِبٌ أَنتَ عَنْ ءَالِهَتِي يَٰٓإِبْرَٰهِيمُ لَئِن لَّمْ تَنتَهِ لَأَرْجُمَنَّكَ وَٱهْجُرْنِي مَلِيًّا ﴿٤٦﴾

47. ಆಗ ಇಬ್‌ರಾಹೀಮರು, "ತಮಗೆ ಸಲಾಮ್, ತಮ್ಮನ್ನು ಕ್ಷಮಿಸಲಿಕ್ಕಾಗಿ ನಾನು ನನ್ನ ಪ್ರಭುವಿನೊಡನೆ ಪ್ರಾರ್ಥಿಸುವೆನು. ನನ್ನ ಪ್ರಭು ನನ್ನ ಮೇಲೆ ಅತ್ಯಧಿಕ ಕೃಪೆಯುಳ್ಳವನು.

قَالَ سَلَٰمٌ عَلَيْكَ سَأَسْتَغْفِرُ لَكَ رَبِّيٓ إِنَّهُۥ كَانَ بِي حَفِيًّا ﴿٤٧﴾

48. ನಾನು ತಮ್ಮನ್ನೂ ತಾವೆಲ್ಲರೂ ಅಲ್ಲಾಹನನ್ನು ಬಿಟ್ಟು ಕೂಗಿ ಪ್ರಾರ್ಥಿಸುತ್ತಿರುವವುಗಳನ್ನೂ ಬಿಟ್ಟಗಲಿ ಹೋಗುತ್ತೇನೆ. ನಾನಂತೂ ನನ್ನ ಪ್ರಭುವನ್ನು ಮಾತ್ರ ಪ್ರಾರ್ಥಿಸುವೆನು. ನಾನು ನನ್ನ ಪ್ರಭುವನ್ನು ಪ್ರಾರ್ಥಿಸಿ ನಿರಾಶನಾಗಲಾರೆ ಎಂದು ನನಗೆ ಭರವಸೆಯಿದೆ" ಎಂದರು.

وَأَعْتَزِلُكُمْ وَمَا تَدْعُونَ مِن دُونِ ٱللَّهِ وَأَدْعُوا۟ رَبِّي عَسَىٰٓ أَلَّآ أَكُونَ بِدُعَآءِ رَبِّي شَقِيًّا ﴿٤٨﴾

49. ಆ ಪ್ರಕಾರ ಅವರು (ಇಬ್‌ರಾಹೀಮರು) ಅವರನ್ನೂ ಅವರ ದೇವೇತರ ಆರಾಧ್ಯರನ್ನೂ ಬಿಟ್ಟಗಲಿದಾಗ ನಾವು ಅವರಿಗೆ ಇಸ್‌ಹಾಕ್ ಮತ್ತು ಯಅ್‌ಕೂಬರಂತಹ ಸಂತತಿಯನ್ನು ಪ್ರದಾನ ಮಾಡಿದೆವು ಮತ್ತು ಪ್ರತಿಯೊಬ್ಬನನ್ನೂ ಪ್ರವಾದಿಯನ್ನಾಗಿ ಮಾಡಿದೆವು.

فَلَمَّا ٱعْتَزَلَهُمْ وَمَا يَعْبُدُونَ مِن دُونِ ٱللَّهِ وَهَبْنَا لَهُۥٓ إِسْحَٰقَ وَيَعْقُوبَ وَكُلًّا جَعَلْنَا نَبِيًّا ﴿٤٩﴾

50. ಅವರಿಗೆ ನಮ್ಮ ಕರುಣೆಯನ್ನೂ ಪ್ರದಾನ ಮಾಡಿದೆವು ಮತ್ತು ನಿಜವಾದ ಖ್ಯಾತಿಯನ್ನು ನೀಡಿದೆವು.

وَوَهَبْنَا لَهُم مِّن رَّحْمَتِنَا وَجَعَلْنَا لَهُمْ لِسَانَ صِدْقٍ عَلِيًّا ﴿٥٠﴾

51. ಈ ಗ್ರಂಥದಲ್ಲಿ ಮೂಸಾರ ಕುರಿತು ಪ್ರಸ್ತಾಪಿಸಿರಿ. ಅವರೊಬ್ಬ ಆಯ್ದ ವ್ಯಕ್ತಿಯಾಗಿದ್ದರು ಮತ್ತು ರಸೂಲ್ (ಸಂದೇಶವಾಹಕ) ಹಾಗೂ ನಬೀ[14] (ಪ್ರವಾದಿ) ಆಗಿದ್ದರು.

وَٱذْكُرْ فِي ٱلْكِتَٰبِ مُوسَىٰٓ إِنَّهُۥ كَانَ مُخْلَصًا وَكَانَ رَسُولًا نَّبِيًّا ﴿٥١﴾

14. 'ರಸೂಲ್' ಎಂದರೆ ಸಂದೇಶವಾಹಕ, ಕಳುಹಿಸಲ್ಪಟ್ಟವ. 'ನಬಿ' ಎಂಬ ಪದದ ಬಗ್ಗೆ ನಿಘಂಟುಕಾರರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರ ಪ್ರಕಾರ 'ನಬಿ' ಎಂದರೆ ಸುದ್ದಿ ತಲಪಿಸುವವನು. ಇನ್ನು ಕೆಲವರ ಪ್ರಕಾರ 'ನಬಿ' ಎಂದರೆ 'ಉನ್ನತ ಪದವಿ' ಮತ್ತು 'ಉಚ್ಚಸ್ಥಾನದಲ್ಲಿರುವವನು.' ಆದ್ದರಿಂದ ಯಾರನ್ನಾದರೂ 'ರಸೂಲ್-ನಬಿ' ಎಂದು ಹೇಳಿದರೆ ಅದರ ಅರ್ಥ 'ಉನ್ನತ ಸ್ಥಾನದಲ್ಲಿರುವ ಸಂದೇಶವಾಹಕ' ಅಥವಾ

52. ನಾವು ಅವರನ್ನು 'ತೂರ್' (ಪರ್ವತದ) ಬಲಗಡೆಯಿಂದ ಕರೆದೆವು. ರಹಸ್ಯ ಸಂಭಾಷಣೆಯ ಮೂಲಕ ಅವರಿಗೆ ಸಾಮಿಪ್ಯ ಪ್ರದಾನ ಮಾಡಿದೆವು.

وَنَادَيْنَاهُ مِن جَانِبِ الطُّورِ الْأَيْمَنِ وَقَرَّبْنَاهُ نَجِيًّا ﴿٥٢﴾

53. ಮತ್ತು ನಮ್ಮ ಕೃಪೆಯಿಂದ ಅವರ ಸಹೋದರ ಹಾರೂನರನ್ನು ಪ್ರವಾದಿಯಾಗಿ ಮಾಡಿ ಅವರಿಗೆ (ಸಹಾಯಕನನ್ನಾಗಿ ಮಾಡಿ) ಕೊಟ್ಟೆವು.

وَوَهَبْنَا لَهُ مِن رَّحْمَتِنَا أَخَاهُ هَارُونَ نَبِيًّا ﴿٥٣﴾

54. ಈ ಗ್ರಂಥದಲ್ಲಿ ಇಸ್ಮಾಈಲರ ಕುರಿತು ಪ್ರಸ್ತಾಪಿಸಿರಿ. ಅವರು ವಚನಪಾಲಕರಾಗಿದ್ದರು ಮತ್ತು ಸಂದೇಶವಾಹಕ ಹಾಗೂ ಪ್ರವಾದಿ ಆಗಿದ್ದರು.

وَاذْكُرْ فِي الْكِتَابِ إِسْمَاعِيلَ ۚ إِنَّهُ كَانَ صَادِقَ الْوَعْدِ وَكَانَ رَسُولًا نَّبِيًّا ﴿٥٤﴾

55. ಅವರು ತನ್ನ ಮನೆಯವರಿಗೆ ನಮಾಝ್ ಮತ್ತು ಝಕಾತ್‌ನ ಅಪ್ಪಣೆ ಕೊಡುತ್ತಿದ್ದರು ಮತ್ತು ತನ್ನ ಪ್ರಭುವಿನ ಬಳಿ ಓರ್ವ ಪ್ರೀತಿಪಾತ್ರ ವ್ಯಕ್ತಿಯಾಗಿದ್ದರು.

وَكَانَ يَأْمُرُ أَهْلَهُ بِالصَّلَاةِ وَالزَّكَاةِ وَكَانَ عِندَ رَبِّهِ مَرْضِيًّا ﴿٥٥﴾

56. ಈ ಗ್ರಂಥದಲ್ಲಿ ಇದ್‌ರೀಸರ ಕುರಿತು ಪ್ರಸ್ತಾಪಿಸಿರಿ. ಅವರೊಬ್ಬ ಸತ್ಯಸಂಧ ಹಾಗೂ ಓರ್ವ ಪ್ರವಾದಿಯಾಗಿದ್ದರು.

وَاذْكُرْ فِي الْكِتَابِ إِدْرِيسَ ۚ إِنَّهُ كَانَ صِدِّيقًا نَّبِيًّا ﴿٥٦﴾

57. ನಾವು ಅವರನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದೆವು.

وَرَفَعْنَاهُ مَكَانًا عَلِيًّا ﴿٥٧﴾

58. ಈ ಪ್ರವಾದಿಗಳು ಅಲ್ಲಾಹನು ಅನುಗ್ರಹಿಸಿದವರಾಗಿದ್ದು, ಆದಮರ ಸಂತತಿಯಿಂದಲೂ ನಾವು ನೂಹರೊಂದಿಗೆ ನಾವೆಯಲ್ಲಿ

أُولَٰئِكَ الَّذِينَ أَنْعَمَ اللَّهُ عَلَيْهِم مِّنَ النَّبِيِّينَ مِن ذُرِّيَّةِ آدَمَ وَمِمَّنْ

'ಅಲ್ಲಾಹನ ವತಿಯಿಂದ ಸುದ್ದಿ ತಲಪಿಸುವ ಸಂದೇಶವಾಹಕ' ಎಂದಾಗುತ್ತದೆ. ಪವಿತ್ರ ಕುರ್‌ಆನಿನಲ್ಲಿ ಈ ಎರಡೂ ಪದಗಳು ಸಾಮಾನ್ಯವಾಗಿ ಸಮಾನಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆ. ಆದರೆ ಕೆಲವು ಕಡೆಗಳಲ್ಲಿ ಅದರ ಪ್ರಯೋಗವನ್ನು ಗಮನಿಸಿದರೆ ಆ ಎರಡು ಪದವಿಗಳಲ್ಲಿ ಸ್ಥಾನ ಮತ್ತು ಕಾರ್ಯದ ಸ್ವರೂಪಕ್ಕೆ ಸಂಬಂಧಿಸಿದಂತೆ ಪಾರಿಭಾಷಿಕ ವ್ಯತ್ಯಾಸವಿದೆ ಎಂದು ವ್ಯಕ್ತವಾಗುತ್ತದೆ. ಉದಾ: ಅಲ್ ಹಜ್ಜ್ ಅಧ್ಯಾಯದ 52ನೆಯ ಸೂಕ್ತದಲ್ಲಿ ಹೀಗೆನ್ನಲಾಗಿದೆ, "ನಾವು ನಿಮಗಿಂತ ಮೊದಲು ಬೇರಾವುದೇ ಕಾರ್ಯಕ್ಕಾಗಿ ರಸೂಲರನ್ನಾಗಲಿ, ನಬಿಯನ್ನಾಗಲಿ ಕಳುಹಿಸಿಲ್ಲ. ಆದರೆ....." 'ರಸೂಲ್' ಮತ್ತು 'ನಬಿ' ಬೇರೆ ಬೇರೆ ಪದಗಳು ಮತ್ತು ಅವುಗಳ ನಡುವೆ ನಿಶ್ಚಿತವಾದ ಪಾರಿಭಾಷಿಕ ವ್ಯತ್ಯಾಸವಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಈ ವ್ಯತ್ಯಾಸದ ಸ್ವರೂಪವೇನು ಎಂಬ ಬಗ್ಗೆ ವ್ಯಾಖ್ಯಾನಕಾರರಲ್ಲಿ ಚರ್ಚೆ ಮುಂದುವರಿದಿದೆ. ಆದರೆ ನಿಖರವಾದ ಆಧಾರಪ್ರಮಾಣಗಳ ಮೂಲಕ ಯಾರೂ 'ರಸೂಲ್' ಮತ್ತು 'ನಬಿ'ಗಳ ವಿಭಿನ್ನ ಸ್ಥಾನಮಾನಗಳನ್ನು ಗೊತ್ತುಪಡಿಸಲಿಲ್ಲ ಎಂಬುದು ಒಂದು ವಾಸ್ತವಿಕತೆಯಾಗಿದೆ. ಹೆಚ್ಚೆಂದರೆ 'ರಸೂಲ್' ಎಂಬ ಪದ 'ನಬಿ' ಎಂಬ ಪದಕ್ಕಿಂತ ವಿಶಿಷ್ಟವಾದುದು ಎಂದು ಹೇಳಬಹುದಾಗಿದೆ. ಅರ್ಥಾತ್ ಪ್ರತಿಯೊಬ್ಬ ರಸೂಲರೂ 'ನಬಿ'ಯಾಗಿರುತ್ತಾರೆ. ಆದರೆ ಪ್ರತಿಯೊಬ್ಬ 'ನಬಿ' ರಸೂಲ್ ಆಗಲು ಸಾಧ್ಯವಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪ್ರವಾದಿಗಳ ಪೈಕಿ ಸಾಮಾನ್ಯ ಪ್ರವಾದಿಗಳಿಗಿಂತ ಪ್ರಾಮುಖ್ಯವಿರುವ ಪದವಿಯಲ್ಲಿ ನೇಮಿಸಲ್ಪಟ್ಟ ಗೌರವಾನ್ವಿತ ವ್ಯಕ್ತಿಗಳನ್ನು 'ರಸೂಲ್' ಎಂದು ಕರೆಯಲಾಗಿದೆ. ಪ್ರವಾದಿ ವಚನವೊಂದರ ಮೂಲಕವೂ ಇದಕ್ಕೆ ಪುಷ್ಟಿ ದೊರೆಯುತ್ತದೆ. ಪ್ರವಾದಿವರ್ಯರೊಡನೆ(ಸ) 'ರಸೂಲ್'ರ ಸಂಖ್ಯೆ ಕೇಳಲಾದಾಗ ಅವರು 313 ಅಥವಾ 315 ಎಂದು ಹೇಳಿದರು. 'ನಬೀ'ಗಳ ಸಂಖ್ಯೆಯ ಬಗ್ಗೆ ಕೇಳಲಾದಾಗ ಅವರು ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರವೆಂದು ಹೇಳಿದರು.

ಏರಿಸಿದ್ದವರ ಸಂತತಿಯಿಂದಲೂ ಇಬ್‌ರಾಹೀಮರ ಸಂತತಿಯಿಂದಲೂ ಇಸ್ರಾಈಲರ ಸಂತತಿಯಿಂದಲೂ ಆಗಿದ್ದರು ಮತ್ತು ನಾವು ಸನ್ಮಾರ್ಗ ದರ್ಶನ ಮಾಡಿ ಪುನೀತರನ್ನಾಗಿಸಿದವರಲ್ಲೂ ಇವರಾಗಿದ್ದರು. ಇವರಿಗೆ ರಹ್ಮಾನನ ವಚನಗಳನ್ನು ಓದಿ ಹೇಳಿದಾಗ ಇವರು ಅಳುತ್ತಾ ಸಾಷ್ಟಾಂಗವೆರಗುತ್ತಿದ್ದರು.

حَمَلْنَا مَعَ نُوحٍ وَّمِنْ ذُرِّيَّةِ إِبْرٰهِيمَ
وَإِسْرَآءِيلَ وَمِمَّنْ هَدَيْنَا وَاجْتَبَيْنَا
إِذَا تُتْلٰى عَلَيْهِمْ اٰيٰتُ الرَّحْمٰنِ خَرُّوا
سُجَّدًا وَّبُكِيًّا ۩ ﴿٥٨﴾

59. ಅವರ ಬಳಿಕ ಅಯೋಗ್ಯರಾದವರು ಅವರ ಉತ್ತರಾಧಿಕಾರಿಗಳಾದರು. ಅವರು ನಮಾಝನ್ನು ವ್ಯರ್ಥಗೊಳಿಸಿದರು ಮತ್ತು ದೇಹೇಚ್ಛೆಗಳನ್ನು ಅನುಸರಿಸಿದರು. ಆದುದರಿಂದ ಶೀಘ್ರದಲ್ಲೇ ಅವರು ಪಥಭ್ರಷ್ಟತೆಯ ಪರಿಣಾಮವನ್ನು ಅನುಭವಿಸಲಿರುವರು.

فَخَلَفَ مِنْ بَعْدِهِمْ خَلْفٌ أَضَاعُوا
الصَّلٰوةَ وَاتَّبَعُوا الشَّهَوٰتِ فَسَوْفَ
يَلْقَوْنَ غَيًّا ﴿٥٩﴾

60. ಆದರೆ ಪಶ್ಚಾತ್ತಾಪ ಪಟ್ಟವರೂ ಸತ್ಯವಿಶ್ವಾಸ ಸ್ವೀಕರಿಸಿಕೊಂಡವರೂ ಸತ್ಕರ್ಮ ಕೈಗೊಂಡವರೂ ಸ್ವರ್ಗದಲ್ಲಿ ಪ್ರವೇಶ ಪಡೆಯುವರು ಮತ್ತು ಅವರ ಹಕ್ಕುಚ್ಯುತಿ ಕಿಂಚಿತ್ತೂ ಆಗದು.

إِلَّا مَنْ تَابَ وَاٰمَنَ وَعَمِلَ صَالِحًا
فَأُولٰٓئِكَ يَدْخُلُونَ الْجَنَّةَ وَلَا
يُظْلَمُونَ شَيْـًٔا ﴿٦٠﴾

61. ಅವರಿಗಾಗಿ ರಹ್ಮಾನನು ತನ್ನ ದಾಸರಿಗೆ ಪರೋಕ್ಷ ವಾಗ್ದಾನವಿತ್ತಿರುವ ಶಾಶ್ವತವಾದ ಸ್ವರ್ಗೋದ್ಯಾನಗಳಿವೆ ಮತ್ತು ನಿಶ್ಚಯವಾಗಿಯೂ ಈ ವಾಗ್ದಾನ ಪೂರ್ಣಗೊಂಡೇ ತೀರುವುದು.

جَنّٰتِ عَدْنِ الَّتِي وَعَدَ الرَّحْمٰنُ عِبَادَهُ
بِالْغَيْبِ ۚ إِنَّهُ كَانَ وَعْدُهُ مَأْتِيًّا ﴿٦١﴾

62. ಅಲ್ಲಿ ಅವರು ಯಾವುದೇ ಅಸಭ್ಯ ಮಾತುಗಳನ್ನು ಆಲಿಸಲಾರರು. ಅವರು ಉತ್ತಮವಾದುದನ್ನೇ ಆಲಿಸುವರು. ಅವರಿಗೆ ಅವರ ಆಹಾರವೂ ಬೆಳಗುಬೈಗುಗಳಲ್ಲಿ ನಿರಂತರ ಸಿಗುತ್ತಲೇ ಇರುವುದು.

لَا يَسْمَعُونَ فِيهَا لَغْوًا إِلَّا سَلٰمًا ۚ وَلَهُمْ
رِزْقُهُمْ فِيهَا بُكْرَةً وَّعَشِيًّا ﴿٦٢﴾

63. ಇದುವೇ ಆ ಸ್ವರ್ಗ. ನಾವು ನಮ್ಮ ದಾಸರಲ್ಲಿ ಧರ್ಮನಿಷ್ಠರಾಗಿದ್ದವನನ್ನು ಅದರ ವಾರೀಸುದಾರನನ್ನಾಗಿ ಮಾಡುವೆವು.

تِلْكَ الْجَنَّةُ الَّتِي نُوْرِثُ مِنْ عِبَادِنَا
مَنْ كَانَ تَقِيًّا ﴿٦٣﴾

64. (ಓ ಪೈಗಂಬರರೇ) ನಾವು ನಿಮ್ಮ ಪ್ರಭುವಿನ ಅಪ್ಪಣೆ ಇಲ್ಲದೆ ಇಳಿದು ಬರುವುದಿಲ್ಲ.[15] ನಮ್ಮ ಮುಂದೆ, ನಮ್ಮ ಹಿಂದೆ ಮತ್ತು ಅವುಗಳ ನಡುವೆ ಏನೆಲ್ಲ ಇರುವುದೋ ಅವೆಲ್ಲವುಗಳ ಮಾಲಕನು ಅವನೇ ಮತ್ತು ನಿಮ್ಮ ಪ್ರಭು ಮರೆತು ಬಿಡುವವನಲ್ಲ.

وَمَا نَتَنَزَّلُ إِلَّا بِأَمْرِ رَبِّكَ ۚ لَهُ مَا
بَيْنَ أَيْدِينَا وَمَا خَلْفَنَا وَمَا بَيْنَ
ذٰلِكَ ۚ وَمَا كَانَ رَبُّكَ نَسِيًّا ﴿٦٤﴾

65. ಅವನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆಯಿರುವ ಸರ್ವಸ್ವಗಳ ಪಾಲಕ ಪ್ರಭು. ಆದುದರಿಂದ ನೀವು ಅವನ ದಾಸ್ಯ-

رَبُّ السَّمٰوٰتِ وَالْأَرْضِ وَمَا بَيْنَهُمَا
فَاعْبُدْهُ وَاصْطَبِرْ لِعِبَادَتِهِ ۚ هَلْ تَعْلَمُ

15. ಇದು ಅಲ್ಲಾಹನ ವಚನವಾದರೂ ಇಲ್ಲಿ ಮಾತನಾಡುತ್ತಿರುವವರು ದೇವಚರರಾಗಿದ್ದಾರೆ. ಅರ್ಥಾತ್ ನಾವು ನಮ್ಮಿಚ್ಛೆಯಂತೆ ಬರುವುದಿಲ್ಲ, ಬದಲಾಗಿ ಅಲ್ಲಾಹನು ಕಳುಹಿಸುವಾಗ ಆಗಮಿಸುತ್ತೇವೆ ಎಂದು ದೇವಚರರು ಪ್ರವಾದಿವರ್ಯರೊಂದಿಗೆ(ಸ) ಹೇಳುತ್ತಿದ್ದಾರೆ.

ಆರಾಧನೆ ಮಾಡಿರಿ ಮತ್ತು ಅವನ ದಾಸ್ಯ-ಆರಾಧನೆಯಲ್ಲೇ ಸ್ಥಿರವಾಗಿರಿ. ನಿಮ್ಮ ತಿಳುವಳಿಕೆಯಲ್ಲಿ ಅವನಿಗೆ ಸರಿಸಮಾನನಾದವನು ಯಾರಾದರೂ ಇದ್ದಾನೆಯೇ?

لَهٗ سَمِيًّا ۝٦٥ ع

66. "ನಾನು ಸತ್ತು ಹೋದ ಮೇಲೆ ನಿಜಕ್ಕೂ ಜೀವಂತಗೊಳಿಸಿ ತರಲ್ಪಡುವೆನೇ?" ಎಂದು ಮಾನವನು ಪ್ರಶ್ನಿಸುತ್ತಾನೆ.

وَيَقُوْلُ الْاِنْسَانُ ءَاِذَا مَا مِتُّ لَسَوْفَ اُخْرَجُ حَيًّا ۝٦٦

67. ಮಾನವನು ಮೊದಲು ಏನೂ ಆಗಿಲ್ಲದಿದ್ದಾಗ ನಾವು ಅವನನ್ನು ಸೃಷ್ಟಿಸಿದ್ದುದು ಅವನಿಗೆ ನೆನಪಾಗುವುದಿಲ್ಲವೇ?

اَوَلَا يَذْكُرُ الْاِنْسَانُ اَنَّا خَلَقْنٰهُ مِنْ قَبْلُ وَلَمْ يَكُ شَيْـًٔا ۝٦٧

68. ನಿಮ್ಮ ಪ್ರಭುವಿನಾಣೆ ನಾವು ಇವರೆಲ್ಲರನ್ನೂ ಇವರ ಸಂಗಡ ಶೈತಾನರನ್ನೂ ಖಂಡಿತವಾಗಿಯೂ ಸುತ್ತುಗಟ್ಟಿ ಆ ಬಳಿಕ ನರಕದ ಸುತ್ತಲೂ ತಂದು ಇವರನ್ನು ಮುಗ್ಗರಿಸಿ ಬೀಳಿಸುವೆವು.

فَوَرَبِّكَ لَنَحْشُرَنَّهُمْ وَالشَّيٰطِيْنَ ثُمَّ لَنُحْضِرَنَّهُمْ حَوْلَ جَهَنَّمَ جِثِيًّا ۝٦٨

69. ಅನಂತರ ಎಲ್ಲ ಗುಂಪುಗಳಿಂದಲೂ ರಹ್ಮಾನನ ವಿರುದ್ಧ ಹೆಚ್ಚು ಉದ್ಧಟನಾಗಿದ್ದ ಪ್ರತಿಯೊಬ್ಬನನ್ನೂ ಹೆಕ್ಕಿ ತೆಗೆಯುವೆವು-

ثُمَّ لَنَنْزِعَنَّ مِنْ كُلِّ شِيْعَةٍ اَيُّهُمْ اَشَدُّ عَلَى الرَّحْمٰنِ عِتِيًّا ۝٦٩

70. ಇವರ ಪೈಕಿ ನರಕದಲ್ಲಿ ತಳ್ಳಲ್ಪಡಲು ಅತಿ ಹೆಚ್ಚು ಅರ್ಹರು ಯಾರೆಂಬುದನ್ನೂ ನಾವು ತಿಳಿದಿದ್ದೇವೆ.

ثُمَّ لَنَحْنُ اَعْلَمُ بِالَّذِيْنَ هُمْ اَوْلٰى بِهَا صِلِيًّا ۝٧٠

71. ನಿಮ್ಮ ಪೈಕಿ ನರಕವನ್ನು ಹಾದು ಹೋಗದವರು ಯಾರೂ ಇರಲಾರರು. ಇದೊಂದು ನಿರ್ಧರಿತ ವಿಷಯವಾಗಿದ್ದು ಇದನ್ನು ಪೂರ್ಣಗೊಳಿಸುವುದು ನಿಮ್ಮ ಪ್ರಭುವಿನ ಬಾಧ್ಯತೆಯಾಗಿದೆ.

وَاِنْ مِّنْكُمْ اِلَّا وَارِدُهَا ۚ كَانَ عَلٰى رَبِّكَ حَتْمًا مَّقْضِيًّا ۝٧١

72. ಆ ಬಳಿಕ ನಾವು (ಭೂಲೋಕದಲ್ಲಿ) ಧರ್ಮನಿಷ್ಠರಾಗಿದ್ದವರನ್ನು ರಕ್ಷಿಸಿಕೊಳ್ಳುವೆವು ಮತ್ತು ಅಕ್ರಮಿಗಳನ್ನು ಅಲ್ಲೇ ಬಿದ್ದಿರಲು ಬಿಟ್ಟು ಬಿಡುವೆವು.

ثُمَّ نُنَجِّى الَّذِيْنَ اتَّقَوْا وَّنَذَرُ الظّٰلِمِيْنَ فِيْهَا جِثِيًّا ۝٧٢

73. ಇವರಿಗೆ ನಮ್ಮ ಸುವ್ಯಕ್ತ ವಚನಗಳನ್ನು ಓದಿ ಹೇಳಿದಾಗ ಸತ್ಯ ನಿಷೇಧಿಗಳು ಸತ್ಯವಿಶ್ವಾಸಿಗಳೊಡನೆ, "ನಮ್ಮಿಬ್ಬರ ಎರಡು ಪಂಗಡಗಳ ಪೈಕಿ ಯಾರು ಉತ್ತಮ ಸ್ಥಿತಿಯಲ್ಲಿದ್ದಾರೆ ಮತ್ತು ಯಾರ ಕೂಟಗಳು ಹೆಚ್ಚು ಶೋಭಾಯಮಾನವಾಗಿವೆ?" ಎಂದು ಕೇಳುತ್ತಾರೆ.[16]

وَاِذَا تُتْلٰى عَلَيْهِمْ اٰيٰتُنَا بَيِّنٰتٍ قَالَ الَّذِيْنَ كَفَرُوْا لِلَّذِيْنَ اٰمَنُوْٓا ۙ اَىُّ الْفَرِيْقَيْنِ خَيْرٌ مَّقَامًا وَّاَحْسَنُ نَدِيًّا ۝٧٣

16. ಮಕ್ಕಾದ ಸತ್ಯನಿಷೇಧಿಗಳು ಹೇಗೆ ವಾದಿಸುತ್ತಿದ್ದರೆಂದರೆ, ನೋಡಿ! ಲೋಕದಲ್ಲಿ ಯಾರಿಗೆ ಅಲ್ಲಾಹನ ಅನುಗ್ರಹ ಪ್ರಾಪ್ತವಾಗುತ್ತಿದೆ? ಯಾರ ಮನೆಗಳು ಹೆಚ್ಚು ಭವ್ಯವಾಗಿವೆ? ಯಾರ ಜೀವನ ಮಟ್ಟ ಉನ್ನತವಾಗಿದೆ? ಯಾರ ಸಭೆ ಸಮಾರಂಭಗಳು ವರ್ಣರಂಜಿತವಾಗಿರುತ್ತವೆ? ಇದೆಲ್ಲವೂ ನಮಗೆ ಪ್ರಾಪ್ತವಿದೆ. ಮುಸ್ಲಿಮರಾದ ನೀವು ಅದರಿಂದ ವಂಚಿತರಾಗಿದ್ದೀರಿ. ಹಾಗಾದರೆ ನೀವೇ ಯೋಚಿಸಿ. ನಾವು ಮಿಥ್ಯಮಾರ್ಗದಲ್ಲಿದ್ದು ಹೀಗೆ ಮೋಜಿನಿಂದಿರಲು ಮತ್ತು ನೀವು ಸನ್ಮಾರ್ಗದಲ್ಲಿದ್ದು ಕಷ್ಟ ಮತ್ತು ಬಡತನದಲ್ಲಿರಲು ಹೇಗೆ ಸಾಧ್ಯ?

74. ವಸ್ತುತಃ ನಾವು ಇವರಿಗಿಂತ ಮುಂಚೆ ಇವರಿಗಿಂತಲೂ ಅಧಿಕ ಸಾಧನಾನುಕೂಲತೆಗಳನ್ನು ಹೊಂದಿದ್ದ ಹಾಗೂ ತೋರಿಕೆಯ ಸುಖಾಡಂಬರಗಳಲ್ಲಿ ಇವರಿಗಿಂತಲೂ ಮಿಗಿಲಾಗಿದ್ದ ಎಷ್ಟೋ ಜನಾಂಗಗಳನ್ನು ನಾಶಗೊಳಿಸಿ ಬಿಟ್ಟಿರುತ್ತೇವೆ.

وَكَمْ أَهْلَكْنَا قَبْلَهُمْ مِّنْ قَرْنٍ هُمْ
أَحْسَنُ أَثَاثًا وَّ رِءْيًا ﴿٧٤﴾

75. ಇವರೊಡನೆ ಹೇಳಿರಿ: ಪಥಭ್ರಷ್ಟತೆಗೊಳಗಾಗಿರುವವನಿಗೆ ಅಂತಹವರೊಡನೆ ಮಾಡಲ್ಪಟ್ಟ ವಾಗ್ದಾನವನ್ನು ಅವರು ಕಣ್ಣಾರೆ ಕಂಡುಕೊಳ್ಳುವವರೆಗೂ ರಹ್ಮಾನನು ಸಡಿಲು ಬಿಡುತ್ತಾನೆ. ಅದು ಯಾತನೆಯಾಗಿರಲಿ ಅಥವಾ ಅಂತಿಮ ಘಳಿಗೆಯಾಗಿರಲಿ - ಆಗ ಅವರಿಗೆ ಯಾರ ಸ್ಥಿತಿ ಕೆಟ್ಟಿದೆ ಮತ್ತು ಯಾವ ಕೂಟ ದುರ್ಬಲವಾಗಿದೆ ಎಂದು ಗೊತ್ತಾಗಿಬಿಡುತ್ತದೆ.

قُلْ مَنْ كَانَ فِي الضَّلٰلَةِ فَلْيَمْدُدْ لَهُ
الرَّحْمٰنُ مَدًّا ۚ حَتّٰٓى إِذَا رَأَوْا مَا
يُوعَدُونَ إِمَّا الْعَذَابَ وَإِمَّا السَّاعَةَ ۖ
فَسَيَعْلَمُونَ مَنْ هُوَ شَرٌّ مَّكَانًا
وَّ أَضْعَفُ جُنْدًا ﴿٧٥﴾

76. ಇದಕ್ಕೆ ವ್ಯತಿರಿಕ್ತವಾಗಿ ಸನ್ಮಾರ್ಗವನ್ನು ಕೈಗೊಂಡವರಿಗೆ ಅಲ್ಲಾಹ್, ಅವರ ಸನ್ಮಾರ್ಗದಲ್ಲಿ ವೃದ್ಧಿಯನ್ನು ದಯಪಾಲಿಸುತ್ತಾನೆ ಮತ್ತು ಬಾಕಿ ಉಳಿಯುವ ಪುಣ್ಯಗಳೇ ನಿಮ್ಮ ಪ್ರಭುವಿನ ಬಳಿ ಸತ್ಫಲ ಹಾಗೂ ಪರಿಣಾಮದ ದೃಷ್ಟಿಯಿಂದ ಉತ್ತಮವಾಗಿವೆ.

وَيَزِيدُ اللّٰهُ الَّذِينَ اهْتَدَوْا هُدًى ۗ
وَالْبٰقِيٰتُ الصّٰلِحٰتُ خَيْرٌ عِنْدَ رَبِّكَ
ثَوَابًا وَّ خَيْرٌ مَّرَدًّا ﴿٧٦﴾

77. ನಮ್ಮ ವಚನಗಳನ್ನು ನಿರಾಕರಿಸುತ್ತ, "ನಾನಂತು ಸಂಪತ್ತು ಮತ್ತು ಸಂತತಿಗಳನ್ನು ಖಂಡಿತವಾಗಿಯೂ ಪಡೆಯುತ್ತಲೇ ಇರುವೆನು" ಎನ್ನುವವನನ್ನು ಕಂಡಿರಾ?

أَفَرَءَيْتَ الَّذِي كَفَرَ بِاٰيٰتِنَا وَقَالَ
لَأُوتَيَنَّ مَالًا وَّ وَلَدًا ﴿٧٧﴾

78. ಇವನಿಗೆ ಅಗೋಚರ ವಿಷಯಗಳ ಸುಳಿವು ಸಿಕ್ಕಿ ಬಿಟ್ಟಿರುವುದೇ? ಅಥವಾ ಇವನು ರಹ್ಮಾನನಿಂದ ಏನಾದರೂ ಕರಾರು ಪಡೆದಿರುವನೇ?

أَطَّلَعَ الْغَيْبَ أَمِ اتَّخَذَ عِنْدَ الرَّحْمٰنِ
عَهْدًا ﴿٧٨﴾

79. ಎಷ್ಟು ಮಾತ್ರಕ್ಕೂ ಇಲ್ಲ. ಇವನು ಒದರುತ್ತಿರುವುದನ್ನು ನಾವು ಬರೆದಿಟ್ಟುಕೊಳ್ಳುವೆವು ಮತ್ತು ಇವನಿಗೆ ಶಿಕ್ಷೆಯನ್ನು ಇನ್ನಷ್ಟು ವರ್ಧಿಸುವೆವು.

كَلَّا ۚ سَنَكْتُبُ مَا يَقُولُ وَنَمُدُّ لَهُ
مِنَ الْعَذَابِ مَدًّا ﴿٧٩﴾

80. ಯಾವ ಸಾಧನಾನುಕೂಲತೆಗಳ ಕುರಿತು ಇವನು ಹೇಳುತ್ತಿರುವನೋ ಅವೆಲ್ಲವುಗಳಿಗೆ ನಾವೇ ವಾರೀಸುದಾರರಾಗುವೆವು ಮತ್ತು ಇವನು ಒಬ್ಬಂಟಿಗನಾಗಿ ನಮ್ಮ ಮುಂದೆ ಹಾಜರಾಗುವನು.

وَّ نَرِثُهُ مَا يَقُولُ وَيَأْتِينَا فَرْدًا ﴿٨٠﴾

81. ಇವರು ಅಲ್ಲಾಹನನ್ನು ಬಿಟ್ಟು ಇತರ ಕೆಲವು ದೇವರುಗಳನ್ನು ಮಾಡಿಕೊಂಡಿದ್ದಾರೆ. ಅವರು ಇವರ ಬೆಂಬಲಿಗರಾದಾರೆಂದು-

وَاتَّخَذُوا مِنْ دُونِ اللّٰهِ اٰلِهَةً لِّيَكُونُوا
لَهُمْ عِزًّا ﴿٨١﴾

82. ಯಾವ ಬೆಂಬಲಿಗನೂ ಇರಲಾರನು. ಅವರೆಲ್ಲರೂ ಇವರ ದಾಸ್ಯ-ಆರಾಧನೆಯನ್ನು ನಿರಾಕರಿಸುವರು ಮಾತ್ರವಲ್ಲ ತಿರುಗಿ ಇವರ ವಿರೋಧಿಗಳೇ ಆಗಿಬಿಡುವರು.

كَلَّا ۚ سَيَكْفُرُونَ بِعِبَادَتِهِمْ وَيَكُونُونَ
عَلَيْهِمْ ضِدًّا ﴿٨٢﴾

83. ನಾವು ಸತ್ಯನಿಷೇಧಿಗಳ ಮೇಲೆ, ಅವರನ್ನು (ಸತ್ಯವನ್ನು ವಿರೋಧಿಸಲಿಕ್ಕಾಗಿ) ಚೆನ್ನಾಗಿ ಹುರಿದುಂಬಿಸುತ್ತಿರುವ ಶೈತಾನರನ್ನು ಬಿಟ್ಟಿರುವುದನ್ನು ನೀವು ಕಂಡಿಲ್ಲವೇ?

أَلَمْ تَرَ أَنَّا أَرْسَلْنَا الشَّيَاطِينَ عَلَى
الْكَافِرِينَ تَؤُزُّهُمْ أَزًّا ﴿٨٣﴾

84. ಆದುದರಿಂದ ಇನ್ನು ಇವರ ಮೇಲೆ ಯಾತನೆಯನ್ನೆರಗಿಸಲಿಕ್ಕಾಗಿ ಕಾತರರಾಗಬೇಡಿರಿ. ನಾವು ಇವರ ದಿನಗಳನ್ನು ಎಣಿಕೆಮಾಡುತ್ತಿದ್ದೇವೆ.

فَلَا تَعْجَلْ عَلَيْهِمْ ۖ إِنَّمَا نَعُدُّ
لَهُمْ عَدًّا ﴿٨٤﴾

85-86. ನಾವು 'ಧರ್ಮನಿಷ್ಠ'ರನ್ನು ರಹ್ಮಾನನ ಸನ್ನಿಧಿಯಲ್ಲಿ ಅತಿಥಿಗಳಂತೆ ಮುಂದೆ ತರುವ ಮತ್ತು ಅಪರಾಧಿಗಳನ್ನು ದಾಹಗೊಂಡ ಪ್ರಾಣಿಗಳಂತೆ ನರಕದ ಕಡೆಗೆ ಅಟ್ಟಿಕೊಂಡು ಹೋಗುವ ದಿನ ಬರಲಿದೆ.

يَوْمَ نَحْشُرُ الْمُتَّقِينَ إِلَى الرَّحْمَٰنِ وَفْدًا ﴿٨٥﴾
وَنَسُوقُ الْمُجْرِمِينَ إِلَىٰ جَهَنَّمَ وِرْدًا ﴿٨٦﴾

87. ಆಗ ರಹ್ಮಾನನ ಸನ್ನಿಧಾನದಿಂದ ಅನುಮತಿ ಪಡೆದು ಕೊಂಡವನ ಹೊರತು ಜನರು ಯಾವ ಶಿಫಾರಸನ್ನೂ ತರಲು ಶಕ್ತರಾಗಲಾರರು.

لَا يَمْلِكُونَ الشَّفَاعَةَ إِلَّا مَنِ اتَّخَذَ
عِنْدَ الرَّحْمَٰنِ عَهْدًا ﴿٨٧﴾

88. ರಹ್ಮಾನನು ಪುತ್ರನನ್ನು ಹೊಂದಿದ್ದಾನೆಂದು ಅವರು ಹೇಳುತ್ತಾರೆ.

وَقَالُوا اتَّخَذَ الرَّحْمَٰنُ وَلَدًا ﴿٨٨﴾

89. ನೀವು ಸೃಷ್ಟಿಸಿ ತಂದಿರುವ ಈ ಮಾತು ತೀರಾ ಅಸಂಬದ್ಧ.

لَقَدْ جِئْتُمْ شَيْئًا إِدًّا ﴿٨٩﴾

90-91. ರಹ್ಮಾನನಿಗೆ ಪುತ್ರನಿರುವನೆಂದು ಜನರು ಆಪಾದಿಸಿದುದಕ್ಕಾಗಿ ಆಕಾಶ ಸಿಡಿದು ಬೀಳುವ, ಭೂಮಿ ಬಿರಿಯುವ ಮತ್ತು ಪರ್ವತಗಳು ಬಿದ್ದು ಹೋಗುವ ಸಮಯ ಸನ್ನಿಹಿತವಾಗಿದೆ.

تَكَادُ السَّمَاوَاتُ يَتَفَطَّرْنَ مِنْهُ وَتَنْشَقُّ
الْأَرْضُ وَتَخِرُّ الْجِبَالُ هَدًّا ﴿٩٠﴾
أَنْ دَعَوْا لِلرَّحْمَٰنِ وَلَدًا ﴿٩١﴾

92. ಯಾರನ್ನಾದರೂ ತನ್ನ ಮಗನನ್ನಾಗಿ ಮಾಡಿಕೊಳ್ಳುವುದು ರಹ್ಮಾನನಿಗೆ ಶೋಭಿಸುವುದಿಲ್ಲ.

وَمَا يَنْبَغِي لِلرَّحْمَٰنِ أَنْ يَتَّخِذَ وَلَدًا ﴿٩٢﴾

93. ಭೂಮಿ-ಆಕಾಶಗಳಲ್ಲಿರುವವರೆಲ್ಲರೂ ಅಲ್ಲಾಹನ ಸನ್ನಿಧಿಯಲ್ಲಿ ದಾಸರ ನೆಲೆಯಲ್ಲಿ ಹಾಜರಾಗಲಿರುವರು.

إِنْ كُلُّ مَنْ فِي السَّمَاوَاتِ وَالْأَرْضِ
إِلَّا آتِي الرَّحْمَٰنِ عَبْدًا ﴿٩٣﴾

94. ಅವನು ಎಲ್ಲರನ್ನೂ ಆವರಿಸಿಕೊಂಡಿದ್ದಾನೆ. ಅವನು ಅವರನ್ನು ಎಣಿಕೆ ಮಾಡಿಟ್ಟಿರುತ್ತಾನೆ.

لَقَدْ أَحْصَاهُمْ وَعَدَّهُمْ عَدًّا ﴿٩٤﴾

95. ಪುನರುತ್ಥಾನದ ದಿನದಂದು ಎಲ್ಲರೂ ಅವನ ಮುಂದೆ ಒಬ್ಬೊಬ್ಬ ರಾಗಿ ಹಾಜರಾಗುವರು.

وَكُلُّهُمْ اٰتِيْهِ يَوْمَ الْقِيٰمَةِ فَرْدًا ﴿٩٥﴾

96. ನಿಶ್ಚಯವಾಗಿಯೂ ಸತ್ಯವಿಶ್ವಾಸವಿರಿಸಿಕೊಂಡು ಸತ್ಕರ್ಮವೆಸಗುತ್ತಿರುವವರಿಗಾಗಿ (ಜನರ) ಹೃದಯಗಳಲ್ಲಿ ರಹ್ಮಾನನು ಸದ್ಯವೇ ಅನುರಾಗವನ್ನುಂಟು ಮಾಡುವನು.[17]

اِنَّ الَّذِيْنَ اٰمَنُوْا وَعَمِلُوا الصّٰلِحٰتِ سَيَجْعَلُ لَهُمُ الرَّحْمٰنُ وُدًّا ﴿٩٦﴾

97. ಆದುದರಿಂದ ಓ ಪೈಗಂಬರರೇ, ನೀವು ಭಯಭಕ್ತಿಯನ್ನಿರಿಸಿಕೊಂಡಿರುವವರಿಗೆ ಸುವಾರ್ತೆಯನ್ನೀಯಲಿಕ್ಕಾಗಿ ಹಾಗೂ ಹಟಸಾಧಕರಿಗೆ ಎಚ್ಚರಿಕೆ ಕೊಡಲಿಕ್ಕಾಗಿಯೇ ನಾವು ಈ ವಾಣಿಯನ್ನು ಸರಳಗೊಳಿಸಿ ನಿಮ್ಮ ಭಾಷೆಯಲ್ಲಿ ಅವತೀರ್ಣಗೊಳಿಸಿರುತ್ತೇವೆ.

فَاِنَّمَا يَسَّرْنٰهُ بِلِسَانِكَ لِتُبَشِّرَ بِهِ الْمُتَّقِيْنَ وَتُنْذِرَ بِهٖ قَوْمًا لُّدًّا ﴿٩٧﴾

98. ಇವರಿಗಿಂತ ಮುಂಚೆ ನಾವು ಎಷ್ಟೋ ಜನಾಂಗಗಳನ್ನು ನಾಶಗೊಳಿಸಿರುತ್ತೇವೆ. ಇಂದು ನಿಮಗೆ ಅವುಗಳ ಸುಳಿವೇನಾದರೂ ಸಿಗುತ್ತಿದೆಯೇ ಅಥವಾ ಕಿಂಚಿತ್ ಧ್ವನಿಯಾದರೂ ಎಲ್ಲಾದರೂ ಕೇಳಿಸುತ್ತಿದೆಯೇ?

وَكَمْ اَهْلَكْنَا قَبْلَهُمْ مِّنْ قَرْنٍ هَلْ تُحِسُّ مِنْهُمْ مِّنْ اَحَدٍ اَوْ تَسْمَعُ لَهُمْ رِكْزًا ﴿٩٨﴾

---

17. ಅರ್ಥಾತ್- ಇಂದು ಅವರನ್ನು ಮಕ್ಕಾದ ಕೇರಿಗಳಲ್ಲಿ ಅಪಮಾನಕ್ಕೆ ಗುರಿಪಡಿಸಲಾಗುತ್ತಿದೆ. ಆದರೆ ಈ ಪರಿಸ್ಥಿತಿ ದೀರ್ಘಕಾಲ ಇರಲಾರದು. ತಮ್ಮ ಸತ್ಕರ್ಮ ಮತ್ತು ಸಚ್ಚಾರಿತ್ರ್ಯದಿಂದಾಗಿ ಅವರು ಅತ್ಯಂತ ಜನಪ್ರಿಯರಾಗಿ ಮಾರ್ಪಡುವ ದಿನ ದೂರವಿಲ್ಲ. ಮನಸ್ಸುಗಳು ಅವರೆಡೆಗೆ ಸೆಳೆಯಲ್ಪಡುವುದು, ಜಗತ್ತು ಅವರನ್ನು ಗೌರವದ ದೃಷ್ಟಿಯಿಂದ ನೋಡುವುದು. ದುರಾಚಾರ, ಕೆಡುಕುಗಳು, ದುರಹಂಕಾರ, ಅಹಂಭಾವ, ಸುಳ್ಳು ಮತ್ತು ತೋರಿಕೆಯ ಆಧಾರದಲ್ಲಿ ನಡೆಯುತ್ತಿರುವ ನಾಯಕತ್ವವು ಜನರನ್ನು ತಲೆಬಾಗುವಂತೆ ಮಾಡೀತು. ಆದರೆ ಜನಮನವನ್ನು ಗೆಲ್ಲಲು ಅದಕ್ಕೆ ಸಾಧ್ಯವಾಗಲಾರದು. ಅದರ ಬದಲು ಸತ್ಯ, ಪ್ರಾಮಾಣಿಕತೆ, ನಿಸ್ವಾರ್ಥತೆ ಮತ್ತು ಸಚ್ಚಾರಿತ್ರ್ಯದೊಂದಿಗೆ ಸನ್ಮಾರ್ಗದೆಡೆಗೆ ಕರೆಯುವವರಿಂದ ಮೊದಮೊದಲು ಜಗತ್ತು ಎಷ್ಟೇ ಬೇಸತ್ತರೂ, ಕೊನೆಗೆ ಅದು ಜನಮನವನ್ನು ಗೆಲ್ಲುವುದು. ಅಪ್ರಾಮಾಣಿಕ ವ್ಯಕ್ತಿಗಳು ಹೆಣೆಯುವ ಸುಳ್ಳುಗಳು ಹೆಚ್ಚು ಕಾಲ ಅವರ ದಾರಿಯನ್ನು ತಡೆಯುವಲ್ಲಿ ಸಫಲವಾಗಲಾರವು.